ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ, ಮಂಗಳೂರು

# ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ

**PILIKULA DVELOPMENT AUTHORITY, MANGALURU**

# PILIKULA REGIONAL SCIENCE CENTRE

## ವರದಿ

## ಆದಿತ್ಯ–ಎಲ್ 1 ಉಡ್ಡಯನದ ನೇರ ಪ್ರಸಾರ ವೀಕ್ಷಣೆ

## Live streaming of Aditya-L1 Launching

ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ ಆದಿತ್ಯ–ಎಲ್ 1 ಉಡ್ಡಯನದ ನೇರ ಪ್ರಸಾರ ವೀಕ್ಷಣೆಗೆ ಬಂದಿದ್ದ ಕುತೂಹಲಿಗಳಿಂದ ತುಂಬಿತು. ಸಾರ್ವಜನಿಕರು, ಶಾಲಾ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಉಡ್ಡಯನ ಸಮಯಕ್ಕೆ ಮೊದಲೇ ಕೇಂದ್ರದ ಸಭಾಭವನಕ್ಕೆ ಬಂದು ಸಂಬಂಧಿತ ವಿಡಿಯೋಗಳನ್ನು ಹಾಗೂ ಭಿತ್ತಿ ಚಿತ್ರ ಪ್ರದರ್ಶನವನ್ನು ವೀಕ್ಷಿಸುತ್ತಿದ್ದರು. ವೀಕ್ಷಕ ವಿವರಣೆಯೊಂದಿಗೆ ಉಡ್ಡಯನದ ಆರಂಭವಾದಾಗ ಎಲ್ಲರೂ ಆಸಕ್ತಿಯಿಂದ ಸಂಬಂಧಿತ ಮಾಹಿತಿಗಳನ್ನು ಕೇಳುತ್ತಾ.. ಆದಿತ್ಯ–ಎಲ್ 1 ಹೊತ್ತ ನಭಕ್ಕೆ ಚಿಮ್ಮುವ ದೃಶ್ಯವನ್ನು ಕಣ್ತುಂಬಿಕೊಂಡು ವಿಜ್ಞಾನಿಗಳ ಸಾಧನೆಗೆ ಹರ್ಷೋದ್ಗಾರದೊಂದಿಗೆ ಪ್ರತಿ ಹಂತದಲ್ಲೂ ಚಪ್ಪಾಳೆ ಮೂಲಕ ಮೆಚ್ಚುಗೆ ಸೂಚಿಸಿದರು. ಯಶಸ್ವಿ ಆರೋಹಣ ಹಾಗೂ ನಿಗದಿತ ಪಥದಲ್ಲಿ ಉಪಗ್ರಹ ಸಾಗುತ್ತಿದೆ ಎಂಬ ಸುದ್ದಿ ಕೇಳಿದ ನಂತರವೇ ಸಾರ್ವಜನಿಕರು ಈ ಸಂದರ್ಭದಲ್ಲಿ ದೂರದರ್ಶಕದ ಮೂಲಕ ಸೂರ್ಯನ ಕಲೆಗಳ ವೀಕ್ಷಣೆಗೆ ಮಾಡಿದ ವ್ಯವಸ್ಥೆಯನ್ನು ಸರತಿ ಸಾಲಿನಲ್ಲಿ ನಿಂತು ವಿವರಣೆಗಳನ್ನು ಕೇಳಿಕೊಂಡು ವೀಕ್ಷಿಸಿದರು.

ಭಾಗವಹಿಸಿದ ವಿದ್ಯಾರ್ಥಿಗಳಿಗೆ ಆದಿತ್ಯ–ಎಲ್ 1 ವಿಷಯ ಸಂಬಂಧಿ ರಸಪ್ರಶ್ನೆಯನ್ನು ಏರ್ಪಡಿಸಿ ವಿಜೇತರಿಗೆ ಬಹುಮಾನ ನೀಡಲಾಯಿತು.

ಇಡಿಯ ಕಾರ್ಯಕ್ರಮದ ಆಯೋಜನೆ, ಭಿತ್ತಿಪತ್ರ ಪ್ರದರ್ಶನ ಹಾಗೂ ದೂರದರ್ಶಕದ ಮೂಲಕ ಸೂರ್ಯ ವೀಕ್ಷಣೆ ಭಾಗವಹಿಸಿದವರಿಗೆ ಆದಿತ್ಯ–ಎಲ್ 1 ಬಗ್ಗೆ ಸಂಪೂರ್ಣ ಮಾಹಿತಿ ನೀಡುವಲ್ಲಿ ಯಶಸ್ವಿಯಾಯಿತು.

ಭಿತ್ತಿಪತ್ರ ಪ್ರದರ್ಶನದ ವಿವರಣೆ, ರಸಪ್ರಶ್ನೆ ಸ್ಪರ್ಧೆ ಹಾಗೂ ದೂರದರ್ಶಕದ ಮೂಲಕ ಸೂರ್ಯ ವೀಕ್ಷಣೆಗಳಿಗೆ ಕೇಂದ್ರದ ಕ್ಯುರೇಟರ್ ಶ್ರೀ ಜಗನ್ನಾಥ್, ವೈಜ್ಞಾನಿಕಾಧಿಕಾರಿ ಶ್ರೀ ವಿಘ್ನೇಶ್ ಭಟ್, ಶೈಕ್ಷಣಿಕ ಸಹಾಯಕ ಶ್ರೀ ಶರಣಯ್ಯ ಹಾಗೂ ಇತರ ಸಿಬ್ಬಂದಿ ಸಹಕರಿಸಿದರು.

Pilikula Regional Science Center was filled with curious people who came to watch the live broadcast of Aditya-L1 launching. The public, students and teachers came to the auditorium before the launching time and watched videos and exhibitions related to space. When the launching started with an explanation, everyone listened to the related information with interest and watched the scene of Aditya-L1 leaping into the sky and cheered for the achievement of the scientists by applauding at every step. Only after hearing the news that the satellite was on its way to a successful launch, the public queued up and asked for explanations of the system made for viewing sunspots through a telescope.

A quiz on Aditya-L1 related subject was organized for the participating students and the winners were awarded.

Curator of the Center Mr. Jagannath, Scientific Officer Mr. Vignesh Bhat, Educational Assistant Mr. Sharaniah and other staff helped in explaining poster exhibition, quiz competition and sun observations through telescope.



Participants of live streaming






CELESTRON

# ಪಿಲಿಕುಳದಲ್ಲಿ 'ಆದಿತ್ಯ' ವೀಕ್ಷಣೆಗೆ ಜನರ ದಂಡು



ಪಿಲಿಕುಳದಲ್ಲಿ ಸೂರ್ಯನ ಕಲೆಗಳ ವೀಕ್ಷಣೆ ಮಾಡಿದ ವಿದ್ಯಾರ್ಥಿಗಳು.

ಮಂಗಳೂರು, ಸೆ. 2: ಆದಿತ್ಯ -ಎಲ್ 1 ಉಡ್ಡಯನದ ನೇರ ಪ್ರಸಾರ ವೀಕ್ಷಣೆಗೆ ಶನಿವಾರ ನೂರಾರು ಮಂದಿ ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರಕ್ಕೆ ಆಗಮಿಸಿದರು.

ಸಾರ್ವಜನಿಕರು, ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಉಡ್ಡಯನ ಸಮಯಕ್ಕೆ ಮೊದಲೇ ಆಗಮಿಸಿ ಸಂಬಂಧಿತ ವೀಡಿಯೋಗಳನ್ನು ಹಾಗೂ ಭಿತ್ತಿಚಿತ್ರ ಪ್ರದರ್ಶನವನ್ನು ವೀಕ್ಷಿಸಿದರು. ವೀಕ್ಷಕ ವಿವರಣೆ ಯೊಂದಿಗೆ ಉಡ್ಡಯನದ ಆರಂಭವಾದಾಗ ಎಲ್ಲರೂ ಆಸಕ್ತಿಯಿಂದ ಸಂಬಂಧಿತ ಮಾಹಿತಿಗಳನ್ನು ಕೇಳುತ್ತಾ ಆದಿತ್ಯ -ಎಲ್ 1 ಹೊತ್ತ ನಭಕ್ಕೆ ಚಿಮ್ಮುವ ದೃಶ್ಯವನ್ನು ಕಣ್ತುಂಬಿಕೊಂಡರಲ್ಲದೆ ವಿಜ್ಞಾನಿಗಳ ಸಾಧನೆಗೆ ಹರ್ಷೋದ್ಗಾರದೊಂದಿಗೆ ಪ್ರತಿ ಹಂತದಲ್ಲೂ ಚಪ್ಪಾಳೆ ಮೂಲಕ ಮೆಚ್ಚುಗೆ ಸೂಚಿಸಿದರು.

ಸಾರ್ವಜನಿಕರು ದೂರದರ್ಶಕದ ಮೂಲಕ ಸೂರ್ಯನ ಕಲೆಗಳ ವೀಕ್ಷಣೆಗೆ ಮಾಡಿದ ವ್ಯವಸ್ಥೆಯನ್ನು ಸದುಪಯೋಗಪಡಿಸಿಕೊಂಡರು. ವಿದ್ಯಾರ್ಥಿಗಳಿಗೆ ಆದಿತ್ಯ-ಎಲ್ 1 ವಿಷಯಸಂಬಂಧಿ ರಸಪ್ರಶ್ನೆಯನ್ನು ಏರ್ಪಡಿಸಿ ವಿಜೇತರಿಗೆ ಬಹುಮಾನ ನೀಡಲಾಯಿತು. ಭಿತ್ತಿಪತ್ರ ಪ್ರದರ್ಶನದ ವಿವರಣೆ, ರಸಪ್ರಶ್ನೆ ಸ್ಪರ್ಧೆ ಹಾಗೂ ದೂರದರ್ಶಕದ ಮೂಲಕ ಸೂರ್ಯ ವೀಕ್ಷಣೆಗಳಿಗೆ ಕೇಂದ್ರದ ಕ್ಯುರೇಟರ್ ಜಗನ್ನಾಥ್, ವೈಜ್ಞಾನಿಕಾಧಿಕಾರಿ ವಿಘ್ನೇಶ್ ಭಟ್, ಶೈಕ್ಷಣಿಕ ಸಹಾಯಕ ಶರಣಯ್ಯ ಹಾಗೂ ಇತರ ಸಿಬಂದಿ ಸಹಕರಿಸಿದರು.